

ಇಲ್ಲೇ ಊಟ ಮುಗಿಸುವುದು ವಾಸಿ' ಎಂದ.

ನಮಗ್ಯಾರಿಗೂ ತೀವ್ರವಾದ ಹಸಿವು ಇರಲಿಲ್ಲ. ಮುಕ್ಕುವುದು ಅನಿವಾರ್ಯ ಎಂದು ಇಳಿದೆವು. ಆತ ಸೂಚಿಸಿದ ಹೊಟೆಲ್ ಸಖತ್ ರಶ್ ಇತ್ತು. ಜನ ಜಾತ್ರೆಯೇ ಅಲ್ಲಿತ್ತು. ತೀರಾ ವಿಚಿತ್ರವೆಂದರೆ ಇದರ ಅಕ್ಕಪಕ್ಕದಲ್ಲೇ ಎರಡು ಹೊಟೆಲ್ ಗಳಿದ್ದರೂ ಅದನ್ನು ಮೂಸಿ ನೋಡುವವರೂ ಇರಲಿಲ್ಲ. ಯಾವ ಗಿರಾಕಿಗಳೂ ಇಲ್ಲದೆ ಲಾಟರಿ ಹೊಡೆಯುತ್ತಿದ್ದವು. ಅವುಗಳ ಓನರ್ ಮತ್ತು ಸಪ್ಲೈಯರ್ ಗಳು ಹ್ಯಾಪು ಮುಖ ಹೊತ್ತುವರಂತೆ ಪಿಳಿಪಿಳಿ ಕಣ್ಣು ಬಿಡುತ್ತಾ ನಿಂತಿದ್ದರು.

ನಾನು ಡಾ.ರಾಘವೇಂದ್ರ ಮೀನು, ಚಿಕನ್, ಮಟನ್ ಮೂರು ಬಾರಿಸುವುದೆಂದು ತೀರ್ಮಾನಿಸಿ ಕುಳಿತೆವು. ಪಕ್ಕಾ ಸಸ್ಯಾಹಾರಿಯಾದ ದೀಪಕ್ ಮಾಮೂಲಿ ಎರಡು ರೊಟ್ಟಿ ತರಕಾರಿ ಪಲ್ಯಕ್ಕೆ ನಿಗದಿಗೊಂಡರು. ಕಚ್ಚಾ ರಸ್ತೆಯಲ್ಲಿ ಕ್ಯಾಮೆರಾ ಬ್ಯಾಗುಗಳನ್ನು ಕಾರು ಎತ್ತೆತ್ತಿ ಹಾಕುವುದು ಜಾಸ್ತಿ. ಲೆನ್ಸ್ ಮತ್ತು ಕ್ಯಾಮೆರಾ ಎರಡನ್ನೂ